# ನಿಷ್ಕಾಮ ಕರ್ಮ

### ಕರ್ಮ ಶಬ್ದದ ವಿವಿಧಾರ್ಥಗಳು

**ಕರ್ಮ** ಶಬ್ದವನ್ನು ಅನೇಕ ಅರ್ಥಗಳಲ್ಲಿ ಬಳಸುತ್ತಾರೆ. ವೈದಿಕ ಯಜ್ಞಯಾಗಾದಿಗಳಿಗೆ ಕರ್ಮ ಶಬ್ದವನ್ನು ಬಳಸುವುದು ರೂಢಿ. ಇದೇ ಅರ್ಥದಲ್ಲಿಯೇ **ಕರ್ಮಕಾಂಡ** ಎಂಬ ಪದ ನಮಗೆ ಬಂದಿರುವುದು. ನಮ್ಮ ಎಲ್ಲ ಚಟುವಟಿಕೆಗಳನ್ನೂ ವಿಶಾಲ ಅರ್ಥದಲ್ಲಿ ಕರ್ಮ ಎಂದು ಕರೆಯಲಾಗುತ್ತದೆ. ನಮ್ಮ ನಮ್ಮ ಜೀವನ ರೀತಿಗೆ ಮತ್ತು ಚಿಂತನೆಗೆ ಅನುಗುಣವಾಗಿ ನಾವು ಪಡೆಯುವ ಫಲವನ್ನೂ ಕರ್ಮ ಎನ್ನುತ್ತೇವೆ. ಇದೇ ಅರ್ಥದಲ್ಲಿಯೇ **ಸಂಚಿತ ಕರ್ಮ, ಪ್ರಾರಬ್ಧ ಕರ್ಮ** ಮತ್ತು **ಆಗಾಮಿ ಕರ್ಮ** ಈ ಪದಗಳು ಬಳಕೆಯಲ್ಲಿವೆ. ಹೀಗೆ ಕರ್ಮ ಶಬ್ದಕ್ಕೆ ಅನೇಕ ಅರ್ಥಗಳಿವೆ. ದುರದೃಷ್ಟ ಎಂಬ ಅರ್ಥದಲ್ಲಿ 'ಇದು ನನ್ನ ಕರ್ಮ' ಎನ್ನುತ್ತೇವೆ.

### ಈ ವಿಶ್ವ ಕರ್ಮಮಯ

ಇಲ್ಲಿ ಕರ್ಮ ಶಬ್ದವನ್ನು ವಿಶಾಲಾರ್ಥದಲ್ಲಿ ಎಲ್ಲ ಕ್ರಿಯೆಗಳು ಎಂಬರ್ಥದಲ್ಲಿ ಬಳಸಲಾಗಿದೆ. ಈ ಜಗತ್ತು ಕರ್ಮಮಯ—ಇಲ್ಲಿ ಪ್ರತಿಯೊಂದೂ ಚಟುವಟಿಕೆಯಿಂದ ಕೂಡಿದೆ. ನಾವು ಯಾವುದನ್ನು ಜಡವಸ್ತುಗಳೆಂದು ಕರೆಯುತ್ತೇವೆಯೊ ಅವೆಲ್ಲವುಗಳ ಕಣ ಕಣದಲ್ಲಿಯೂ ನಿರಂತರ ಚಟುವಟಿಕೆಯನ್ನು ನೋಡುತ್ತೇವೆ. ಈ ವಿಶ್ವ ಚಲನಾತ್ಮಕವಾಗಿರುವುದರಿಂದಲೇ ಇದನ್ನು **ಜಗತ್** ಎಂದು ಕರೆಯುವುದು. ಪ್ರಕೃತಿ ಎಂದರೆ ತೀವ್ರ ಚಟುವಟಿಕೆಯುಳ್ಳದ್ದು ಎಂದರ್ಥ. ಈ ಜಗತ್ತು ಆ ಪ್ರಕೃತಿಯ ಉತ್ಪನ್ನವಾಗಿರುವುದರಿಂದ ಅದೂ ಚಟುವಟಿಕೆಯಿಂದ ಕೂಡಿರಲೇಬೇಕು. ಸಂಪೂರ್ಣ ನಿಷ್ಕ್ರಿಯವಾದ ಸ್ಥಿತಿಯನ್ನು ನಾವು ಕಲ್ಪಿಸಿಕೊಳ್ಳಲಾರೆವು. ಆ ರೀತಿ ಕಲ್ಪಿಸಿಕೊಳ್ಳುವುದೇ ಒಂದು ಕ್ರಿಯೆ. ನಮ್ಮ ದೇಹ ಮನಸ್ಸುಗಳೂ ಪ್ರಕೃತಿಯ ಉತ್ಪನ್ನವಾಗಿರುವುದರಿಂದ ಅವೂ ನಿರಂತರ ಕರ್ಮನಿರತವಾಗಿವೆ. 'ಯಾವೊಬ್ಬ ವ್ಯಕ್ತಿಯೂ ಒಂದು ಕ್ಷಣವೂ ಕ್ರಿಯಾಶೂನ್ಯನಾಗಿ ಇರಲಾರ'(**ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್**) ನಾವು ಸುಮ್ಮನೆ ಕುಳಿತುಕೊಂಡಿದ್ದರೂ ನಮ್ಮ ದೇಹದ ಅಂಗಾಂಗಗಳು, ಜೀವಕಣಗಳು ನಿರಂತರವಾಗಿ ಕೆಲಸ ಮಾಡುತ್ತಿರುತ್ತವೆ. ಅವುಗಳು ಕೆಲಸ ಮಾಡುವುದನ್ನು ನಿಲ್ಲಿಸಿದರೂ ಅವುಗಳಲ್ಲಿ ಬೇರೊಂದು ರೀತಿಯಲ್ಲಿ ಕೆಲಸ ನಡೆಯುತ್ತಿರುತ್ತದೆ. ಅಂತೂ ನಾವು ಕೆಲಸದಿಂದ ತಪ್ಪಿಸಿಕೊಳ್ಳಲಾರೆವು. ನಾವದನ್ನು ಬಿಟ್ಟರೂ ಅದು ನಮ್ಮನ್ನು ಬಿಡುವುದಿಲ್ಲ. **ಕರ್ಮದ ಬದಲಾವಣೆ ಸಾಧ್ಯ, ಕರ್ಮ ತ್ಯಾಗ ಸಾಧ್ಯವಿಲ್ಲ.**

### ಕರ್ಮದಿಂದ ಬಿಡುಗಡೆ

ಹಾಗಾದರೆ ಈ ಕರ್ಮಬಂಧನದಿಂದ ಬಿಡುಗಡೆ ಹೇಗೆ ಸಾಧ್ಯ? ಕರ್ಮಬಂಧನದಿಂದ ಬಿಡುಗಡೆಯೆಂದರೆ ಕರ್ಮದಿಂದ ಬಿಡುಗಡೆಯಲ್ಲ, ಅದರ ಪರಿಣಾಮದಿಂದ ಬಿಡುಗಡೆ. ಕರ್ಮವನ್ನು ಮಾಡಿಯೂ ಅದರ ಪರಿಣಾಮಕ್ಕೆ ಒಳಗಾಗದಿರುವುದು ಬಿಡುಗಡೆ (**ಕುರ್ವನ್ನಪಿ ನ ಲಿಪ್ಯತೇ**). ಇದು ಹೇಗೆ ಸಾಧ್ಯ? ಬೆಂಕಿಗೆ ಕೈಹಾಕಿದರೆ ಅದು ಸುಡದೆ ಇರುತ್ತದೆಯೆ? ಊಟ ಮಾಡಿದರೆ ಅದು ಜೀರ್ಣವಾಗದೆ ಇರುತ್ತದೆಯೇ? ಬೆಂಕಿಗೆ ಕೈ ಹಾಕಿದರೆ ಕೈ ಸುಡುವುದೂ ಕರ್ಮವೇ, ಊಟ ಮಾಡಿದರೆ ಜೀರ್ಣವಾಗುವುದೂ ಕರ್ಮವೇ. ಕರ್ಮ, ಅದರ ಫಲ ಎಲ್ಲವೂ ಕರ್ಮವೇ. ಕರ್ಮದಿಂದ ಬೇರೆಯಾದ ಕರ್ಮಪರಿಣಾಮ ಇರಲಾರದು. ಹಾಗಾದರೆ ಕರ್ಮಬಂಧನದಿಂದ ಬಿಡುಗಡೆ ಎಂದರೇನು?

ಕರ್ಮ ಪ್ರಕೃತಿಗೆ ಸೇರಿದ್ದು, ಅದರ ಪಾಡಿಗೆ ಅದು ಕೆಲಸ ಮಾಡುತ್ತಿರುತ್ತದೆ. ಅದರಲ್ಲಿ ಬಂಧಿಸುವ ಅಂಶ ಯಾವುದೂ ಇಲ್ಲ. ಪ್ರಕೃತಿ ಜಡವಾದುದರಿಂದ ಅದು ತಾನು ಯಾರನ್ನಾದರೂ ಬಂಧಿಸಬೇಕೆಂಬ ಉದ್ದೇಶದಿಂದ ಕೆಲಸ ಮಾಡುತ್ತಿಲ್ಲ. ಆದರೆ ನಾವು ಅದರ ಕೆಲಸವನ್ನು ನಮ್ಮ ಸ್ವಂತದ್ದನ್ನಾಗಿಸಿಕೊಳ್ಳುತ್ತೇವೆ—ಅದರೊಡನೆ ನಮ್ಮನ್ನು ಒಂದಾಗಿಸಿಕೊಳ್ಳುತ್ತೇವೆ. ಇದೇ ಬಂಧನ.

ನದಿಯಲ್ಲಿ ಸುಳಿ ಸುತ್ತುತ್ತಿರುತ್ತದೆ. ಒಬ್ಬ ವ್ಯಕ್ತಿಯು ಆಕಸ್ಮಿಕವಾಗಿ ಆ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತಾನೆ. ಸುಳಿಯೇನೂ ಅವನನ್ನು ಕರೆಯಲಿಲ್ಲ—ಅವನನ್ನು ಬಂಧಿಸಬೇಕೆಂಬ ದೃಷ್ಟಿಯಿಂದ ಸುತ್ತುತ್ತಿಲ್ಲ. ಆದರೆ ಆ ವ್ಯಕ್ತಿಯೆ ಹೋಗಿ ಅದರಲ್ಲಿ ಸಿಕ್ಕಿಕೊಳ್ಳುತ್ತಾನೆ. ಹಾಗೆಯೇ ಈ ಪ್ರಕೃತಿ ಎನ್ನುವುದೊಂದು ಅನಂತ ಕರ್ಮಪ್ರವಾಹ. ಅದರಲ್ಲಿ ಈ ದೇಹವೆಂಬುದೊಂದು ಸುಳಿ. ಈ ಸುಳಿಯಲ್ಲಿ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಇದರಿಂದ ತಪ್ಪಿಸಿಕೊಳ್ಳುವುದೇ ಬಿಡುಗಡೆ. ತಪ್ಪಿಸಿಕೊಂಡಮೇಲೂ ಸುಳಿ ತನ್ನ ಪಾಡಿಗೆ ತಾನು ಸುತ್ತುತ್ತಿರುತ್ತದೆ. ಆದ್ದರಿಂದ ಕರ್ಮದೊಡನೆ ತಾದಾತ್ಮ್ಯಭಾವವನ್ನು ಸಂಪೂರ್ಣವಾಗಿ ಬಿಡುವುದೇ ನಿಜವಾದ ಬಿಡುಗಡೆ.

### 'ನಾನು'ವಿನ ಪಾತ್ರ

ಈ ತಾದಾತ್ಮ್ಯಭಾವ ಹೇಗೆ ಉಂಟಾಗುತ್ತದೆ? 'ನಾನು' ಎಂಬ ಭಾವದಿಂದ. ಈ 'ನಾನು'ಎಂಬುದು ಪ್ರಕೃತಿಯ ಕರ್ಮವನ್ನು ತನ್ನದಾಗಿಸಿಕೊಳ್ಳುತ್ತದೆ—ನಾನು ಮಾಡುತ್ತಿದ್ದೇನೆ ಎಂದು ಭಾವಿಸುತ್ತದೆ. ಈ 'ನಾನು' ಎಂಬುದು ಎಲ್ಲಿಂದ ಬರುತ್ತದೆ? ಇದನ್ನು

> ಮಾನವನಿಗೆ ಆಹಾರ ಮತ್ತು ನಿದ್ರೆ ಎಷ್ಟು ಆವಶ್ಯಕವೋ ಕೆಲಸವೂ ಅಷ್ಟೇ ಆವಶ್ಯಕ. ಕೆಲಸ ಎಂದು ಕರೆಯಬಹುದಾದ ಏನನ್ನೂ ಮಾಡದೆ ಇರುವವರೂ ತಾವೇನೋ ಮಾಡುತ್ತಿರುವುದಾಗಿ ಕಲ್ಪಿಸಿಕೊಳ್ಳುತ್ತಾರೆ. ತನ್ನ ದೃಷ್ಟಿಯಲ್ಲಿಯೆ ಸೋಮಾರಿ ಎನಿಸಿಕೊಳ್ಳುವವನು ಈ ಪ್ರಪಂಚದಲ್ಲಿಲ್ಲ.
>
> ಕಾರ್ಲ್ ವಿಲ್ಹೇಮ್ ಹಮ್‌ಬೋಲ್ಟ್, ಜರ್ಮನ್ ಭಾಷಾವಿಜ್ಞಾನಿ

ಹೇಳಲಾಗುವುದಿಲ್ಲ. ಪ್ರಕೃತಿ ಜಡವಾದುದರಿಂದ ಅದರಲ್ಲಿ 'ನಾನು' ಎಂಬ ಭಾವ ಉಂಟಾಗಲು ಸಾಧ್ಯವಿಲ್ಲ. ಆತ್ಮನು ಅನಂತನಾಗಿರುವುದರಿಂದ 'ನಾನು' ಎಂಬ ವ್ಯಕ್ತಿಭಾವವನ್ನು ಅವನಿಗೆ ಆರೋಪಿಸಲಾಗುವುದಿಲ್ಲ. ಆದ್ದರಿಂದ ಈ 'ನಾನು' ಎಂಬುದು ರಹಸ್ಯಾತ್ಮಕವಾದುದು. ಅದೊಂದು ಅಸತ್ಯವಾದ ಸತ್ಯ. ಇಡೀ ನಮ್ಮ ಜೀವನವೇ ಈ ಸತ್ಯವನ್ನು ಅವಲಂಬಿಸಿದೆ. ನಮ್ಮ ಯಾವುದೇ ಕ್ರಿಯೆಯನ್ನು ವಿಶ್ಲೇಷಿಸುತ್ತ ಹೋದರೂ ಅಲ್ಲಿ 'ನಾನು' ಕಾಣುವುದೇ ಇಲ್ಲ.

ಒಂದು ಉಪನ್ಯಾಸದ ಕ್ರಿಯೆಯನ್ನು ತೆಗೆದುಕೊಳ್ಳೋಣ. ಇದೊಂದು ಘಟನೆ. ಈ ಘಟನೆಯು ಹಲವಾರು ಅಂಶಗಳು ಸೇರಿ ಆಗಿರುವುದು. ಮೊದಲನೆಯದಾಗಿ ಉಪನ್ಯಾಸವನ್ನು ಕೇಳುವುದಕ್ಕೆ ಶ್ರೋತೃಗಳು ಇರಬೇಕು. ಗಾಳಿ, ಬೆಳಕು ಮುಂತಾದ ಅನುಕೂಲತೆಗಳಿರಬೇಕು. ಉಪನ್ಯಾಸಕನ ಗಂಟಲು ಸರಿಯಿರಬೇಕು. ನಿಜವಾಗಿ ಮಾತನಾಡುವುದು ಅವನ ಧ್ವನಿಪೆಟ್ಟಿಗೆ. ಇವಿಷ್ಟಲ್ಲದೆ ಆಲೋಚಿಸುವ ಮನಸ್ಸು ಇಲ್ಲದಿದ್ದರೆ ಉಪನ್ಯಾಸ ಸಾಧ್ಯವೇ ಇಲ್ಲ. ಮನಸ್ಸೂ ಕೂಡ ಆಲೋಚನೆಗಳನ್ನು ತಾನೇ ಸೃಷ್ಟಿಸುವುದಿಲ್ಲ—ಅವು ಅಧ್ಯಯನ, ಅನುಭವ ಮುಂತಾದುವುಗಳ ಒಟ್ಟು ಪರಿಣಾಮ. ಇವೆಲ್ಲವೂ ಪ್ರಾಕೃತಿಕ ಅಂಶಗಳು. ಇಲ್ಲಿ 'ನಾನು ಉಪನ್ಯಾಸ ಮಾಡುತ್ತೇನೆ' ಎಂಬ ಮಾತಿಗೆ ಅರ್ಥವೇ ಇಲ್ಲ. ಈ ಘಟನೆಯಲ್ಲಿ 'ನಾನು'ವಿನ ಪಾತ್ರವೇ ಇಲ್ಲ. 'ನಾನು' ಎಂಬುದು ಇಲ್ಲದಿದ್ದರೂ ಅದರ ಪಾತ್ರ ಅತ್ಯಂತ ಮಹತ್ತರವಾದುದು. ಏಕೆಂದರೆ ಅದಿಲ್ಲದೆ ಜೀವನವೇ ಇಲ್ಲ.

'ನಾನು' ಎಂಬುದು ರಹಸ್ಯಾತ್ಮಕವಾದುದು. ಅದೊಂದು ಅಸತ್ಯವಾದ ಸತ್ಯ. ಇಡೀ ನಮ್ಮ ಜೀವನವೇ ಈ ಸತ್ಯವನ್ನು ಅವಲಂಬಿಸಿದೆ.

## ಎಲ್ಲವೂ ಘಟನೆಗಳು

ಎಲ್ಲ ಘಟಕಗಳನ್ನೂ ಸಂಯೋಜಿಸುವ ಒಂದು ಅಂಶವೇ 'ನಾನು' ಎಂಬುದು ಎಂದು ಹೇಳಬಹುದು. ಆದರೆ ಈ ಸಂಯೋಜನೆಯೂ ಒಂದು ಕ್ರಿಯೆಯಾದುದರಿಂದ ಅದೂ ಪ್ರಕೃತಿಗೇ ಸೇರಿರಬೇಕು. ಯಾವುದೋ ಪ್ರಾಕೃತಿಕ ನಿಯಮಗಳಿಗೆ ಅನುಸಾರವಾಗಿ ವಿವಿಧ ಅಂಶಗಳ ಸಂಯೋಜನೆಯು ನಡೆದು ಅನೇಕ ಘಟನೆಗಳು ಈ ಪ್ರಪಂಚದಲ್ಲಿ ಸಂಭವಿಸುತ್ತವೆ. ಈ ಉಪನ್ಯಾಸವೂ ಅಂಥದೇ ಒಂದು ಘಟನೆ. ಸೂರ್ಯನ ಸುತ್ತ ಗ್ರಹಗಳು ಸುತ್ತುವುದೂ ಅಂಥದೇ ಒಂದು ಘಟನೆ. ಜೀವಕೋಶಗಳೆಲ್ಲ ಸೇರಿ ಈ ದೇಹರಚನೆಯಾಗಿರುವುದೂ ಅಂಥದೇ ಒಂದು ಘಟನೆ. ಎಲ್ಲವೂ ಪ್ರಕೃತಿಯ ಕ್ರಿಯೆಗಳೇ. ಆದ್ದರಿಂದ ಇಲ್ಲಿ 'ನಾನು ಮಾಡುತ್ತೇನೆ ' ಎಂಬ ಭಾವನೆಗೆ ಅವಕಾಶವೇ ಇಲ್ಲ. ಶ್ರೀಕೃಷ್ಣನೂ ಇದನ್ನೇ ಹೇಳುತ್ತಾನೆ:

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ |
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ ||
(ಗೀತೆ, ೩.೨೭)

'ಪ್ರಕೃತಿಯ ಗುಣಗಳಿಂದಲೇ ಎಲ್ಲ ಕ್ರಿಯೆಗಳೂ ನಡೆಯುತ್ತಿರುವುದು. ಅಹಂಕಾರದಿಂದ ಮೋಹಿತನಾದವನು "ನಾನು ಮಾಡುತ್ತೇನೆ " ಎಂದು ಭಾವಿಸುತ್ತಾನೆ.' ನಿಜವಾಗಿ 'ನಾನು' ಎಂಬುದು ಒಂದು ಮಿಥ್ಯಾಕಲ್ಪನೆ. ಶ್ರೀರಾಮಕೃಷ್ಣರು ಇದನ್ನು ಒಂದು ಸುಂದರವಾದ ಉದಾಹರಣೆಯ ಮೂಲಕ ವಿವರಿಸುತ್ತಿದ್ದರು. ಒಬ್ಬ ವ್ಯಕ್ತಿಯು ಈರುಳ್ಳಿ ಎಂದರೆ ಏನು ಎಂಬುದನ್ನು ತಿಳಿಯ ಬಯಸಿದನು. ಒಂದು ಈರುಳ್ಳಿಯನ್ನು ತೆಗೆದುಕೊಂಡು ತನ್ನ ಅನ್ವೇಷಣೆಯನ್ನು ಪ್ರಾರಂಭಿಸಿದನು. ಮೇಲಿನ ಒಣಗಿರುವ ಸಿಪ್ಪೆಯನ್ನು ಬಿಡಿಸಿದನು. ಅನಂತರ ಹಸಿಯಾದ ಪದರಗಳನ್ನು ಒಂದಾದ ಮೇಲೊಂದರಂತೆ ಬಿಡಿಸುತ್ತಾ ಹೋದನು. ಕೊನೆಗೆ ಅವನ ಕೈಯಲ್ಲಿ ಏನೂ ಉಳಿಯಲೇ ಇಲ್ಲ. ಹೀಗೆಯೆ 'ನಾನು' ಎಂದರೆ ಏನು ಎಂದು ತಿಳಿಯಹೊರಟರೂ ಇದೇ ಸ್ಥಿತಿ ಉಂಟಾಗುವುದು. ನಮ್ಮ ವ್ಯಕ್ತಿತ್ವದ ಒಂದೊಂದೇ ಪದರವನ್ನು ಬಿಡಿಸುತ್ತ ಹೋದರೆ ಕೊನೆಗೆ 'ನಾನು' ಎಂಬುದು ಉಳಿಯುವುದೇ ಇಲ್ಲ.

## ಸಾಕ್ಷಿಭಾವ

ತಾನು ಅಕರ್ತೃ, ಕೇವಲ ಸಾಕ್ಷಿ ಎಂಬ ಭಾವದಿಂದ ಸಂಪೂರ್ಣ ನಿರ್ಲಿಪ್ತತೆಯಿಂದಿರುವುದೇ ಕರ್ಮಬಂಧನದಿಂದ ಬಿಡುಗಡೆ. ವಿದ್ಯಾರಣ್ಯರ 'ಪಂಚದಶಿ'ಯಲ್ಲಿ ಒಂದು ಶ್ಲೋಕ ಬರುತ್ತದೆ:

ಅಹಂಕಾರಃ ಪ್ರಭುಃ ಸಭ್ಯಾ
ವಿಷಯಾ ನರ್ತಕೀ ಮತಿಃ |
ತಾಲಾದಿಧಾರೀಣ್ಯಕ್ಷಾಣಿ
ದೀಪಃ ಸಾಕ್ಷ್ಯವಭಾಸಕಃ || (೧೦.೧೪)

'ರಾಜನಾದ ಅಹಂಕಾರನು ಸಿಂಹಾಸನದ ಮೇಲೆ ಕುಳಿತಿದ್ದಾನೆ. ವಿಷಯಗಳೆಂಬ ಸಭಾಸದರು ನೆರೆದಿದ್ದಾರೆ. ಮನಸ್ಸೆಂಬ ನರ್ತಕಿಯು ನರ್ತಿಸುತ್ತಿದ್ದಾಳೆ. ಚಕ್ಷುರಾದಿ ಇಂದ್ರಿಯಗಳು ತಾಳ ಮೃದಂಗಾದಿಗಳನ್ನು ಬಾರಿಸುತ್ತಿದ್ದಾರೆ. ಇವೆಲ್ಲವನ್ನೂ ಬೆಳಗುತ್ತಿರುವ ದೀಪವೇ ಸಾಕ್ಷಿ.' ಇಲ್ಲಿ ದೀಪವು ತಾನು ಯಾವ ಕ್ರಿಯೆಯಲ್ಲೂ ತೊಡಗದೆ ಎಲ್ಲ ಕ್ರಿಯೆಗಳನ್ನೂ ಬೆಳಗಿಸುತ್ತಿದೆ. ಹೀಗೆಯೆ ನಾವು ಎಲ್ಲ ಕ್ರಿಯೆಗಳನ್ನೂ—ನಮ್ಮ ದೈಹಿಕ ಮಾನಸಿಕ ಕ್ರಿಯೆಗಳನ್ನೂ ಕೇವಲ ಸಾಕ್ಷಿಯಂತೆ ನೋಡುತ್ತಿರಬೇಕು. ಇಲ್ಲಿ 'ನೋಡು'ಎಂಬ ಕ್ರಿಯಾಪದವನ್ನು ಬಳಸಿದ್ದರೂ ಇದೊಂದು ಕ್ರಿಯೆಯಲ್ಲ—ಶುದ್ಧ ಅರಿವು (*Pure awareness*).

ಒಂದು ಯಂತ್ರವು ಬಹಳಷ್ಟು ಕೆಲಸ ಮಾಡುತ್ತದೆ. ಆದರೆ ಅದರಲ್ಲಿ 'ನಾನು ಮಾಡುತ್ತಿರುವೆ'ನೆಂಬ ಭಾವ ಇರುವುದೇ ಇಲ್ಲ. ಹಾಗೆಯೇ ಜೀವನ್ಮುಕ್ತನೂ ಕರ್ಮನಿರತನಾಗಿರುತ್ತಾನೆ. ಅವನಲ್ಲಿಯೂ 'ನಾನು ಮಾಡುತ್ತೇನೆ' ಎಂಬ ಭಾವವಿರುವುದಿಲ್ಲ. ಕರ್ತೃತ್ವಶೂನ್ಯತೆ ಈ ಎರಡೂ ಸಂದರ್ಭಗಳಲ್ಲಿ ಸಮಾನವಾಗಿದೆ. ಆದರೆ ಯಂತ್ರದಲ್ಲಿ 'ಅರಿವು' ಶೂನ್ಯವಾಗಿದ್ದರೆ, ಜೀವನ್ಮುಕ್ತನಲ್ಲಿ ಅರಿವೇ ತುಂಬಿಕೊಂಡಿರುತ್ತದೆ, ತಾನೇ ಅರಿವಾಗಿರುತ್ತಾನೆ. ಇವನಲ್ಲಿ ನಡೆಯುವ ಭೌತಿಕ ಮಾನಸಿಕ ಕ್ರಿಯೆಗಳೆಲ್ಲವೂ ಸಂಪೂರ್ಣ



(೧೦ .೧೪)

ನಿಷ್ಕಾಮವಾಗಿರುತ್ತದೆ, ಏಕೆಂದರೆ ಅಲ್ಲಿ 'ನಾನೆ'ಂಬುದಿರುವುದಿಲ್ಲ—ಕರ್ತೃ ಇಲ್ಲದಿರುವುದರಿಂದ ಭೋಕ್ತೃವೂ ಇರುವುದಿಲ್ಲ.

> ಯಂತ್ರದಲ್ಲಿ 'ಅರಿವು' ಶೂನ್ಯವಾಗಿದ್ದರೆ, ಜೀವನ್ಮುಕ್ತನಲ್ಲಿ ಅರಿವೇ ತುಂಬಿಕೊಂಡಿರುತ್ತದೆ, ತಾನೇ ಅರಿವಾಗಿರುತ್ತಾನೆ.

### ಕರ್ಮಫಲತ್ಯಾಗ

ಆದರೆ ಈ 'ನಾನು' ಎಂಬುದು ಅಷ್ಟು ಬೇಗ ಬಿಟ್ಟುಹೋಗುವುದಿಲ್ಲ. ಇದು ಅಶ್ವತ್ಥದ ಗಿಡದಂತೆ ಎಂದು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಇಂದು ಅದನ್ನು ಕತ್ತರಿಸಿ ಹಾಕಿದರೆ ನಾಳೆ ಅದು ಮತ್ತೆ ಚಿಗುರಿಕೊಂಡಿರುತ್ತದೆ. ನಾನು ಮಾಡುತ್ತೇನೆ ಎಂಬ ಭಾವ ಇರುವವರೆಗೂ ಫಲಾಪೇಕ್ಷೆಯನ್ನು ಬಿಟ್ಟು ಕರ್ಮ ಮಾಡಬೇಕಾಗುತ್ತದೆ. ಪ್ರತಿಯೊಬ್ಬರಿಗೂ ಅವರವರ ಜೀವನದ ಹಂತ, ವಿಕಾಸದ ಹಂತ, ಸಾಮಾಜಿಕ ಸ್ಥಾನ ಇವುಗಳಿಗನುಸಾರವಾಗಿ ಕರ್ಮಗಳು ಬಂದೊದಗುತ್ತವೆ. ಅವುಗಳನ್ನು ನಿಷ್ಕಾಮಭಾವದಿಂದ, ಫಲಾಪೇಕ್ಷೆಯಿಲ್ಲದೆ, ಕರ್ತವ್ಯಪ್ರಜ್ಞೆಯಿಂದ ಮಾಡಬೇಕು. ಫಲಾಪೇಕ್ಷೆಯಿಂದ ಕರ್ಮಾಸಕ್ತಿ ಅಧಿಕವಾಗುತ್ತದೆ. ಇದೇ ಕರ್ಮಬಂಧನ. ಆದ್ದರಿಂದ ಮೊದಲು ಕರ್ಮಫಲವನ್ನು ತ್ಯಜಿಸಬೇಕು.

### ಕರ್ಮದ ವಿವಿಧ ಫಲಗಳು

ಕರ್ಮಕ್ಕೆ ಅನೇಕ ಫಲಗಳಿರುತ್ತವೆ. ಒಂದು ವ್ಯಾಪಾರದ ಕೆಲಸವನ್ನು ತೆಗೆದುಕೊಳ್ಳೋಣ. ಅನೇಕ ಮಂದಿ ಗ್ರಾಹಕರು ಅದರಿಂದ ಪ್ರಯೋಜನವನ್ನು ಪಡೆಯುತ್ತಾರೆ—ಇದೊಂದು ಫಲ. ವ್ಯಾಪಾರಿಯು ಹಣವನ್ನು ಗಳಿಸುತ್ತಾನೆ—ಇದೊಂದು ಫಲ. ಸರಿಯಾದ ರೀತಿಯಲ್ಲಿ ವ್ಯಾಪಾರ ಮಾಡುವುದರಿಂದ ಒಳ್ಳೆಯ ವ್ಯಾಪಾರಿಯೆಂಬ ಕೀರ್ತಿಯನ್ನೂ ಅಥವಾ ಹಾಗೆ ಮಾಡದಿದ್ದರೆ ಅಪಕೀರ್ತಿಯನ್ನೂ ಗಳಿಸುತ್ತಾನೆ—ಇದೂ ಒಂದು ಫಲ. ಅವನು ಯಾವ ಮನೋಭಾವದಿಂದ ವ್ಯಾಪಾರ ಮಾಡುತ್ತಾನೆ ಎಂಬುದನ್ನನುಸರಿಸಿ ಅವನ ಮನಸ್ಸಿನಲ್ಲಿ ಸತ್ ಅಥವಾ ದುಷ್ಟ ಸಂಸ್ಕಾರಗಳು ಉಂಟಾಗುತ್ತವೆ. ಹೀಗೆ ಯಾವುದೇ ಕರ್ಮವನ್ನು ವಿಶ್ಲೇಷಿಸುತ್ತ ಹೋದರೆ ಅದಕ್ಕೆ ಅನೇಕ ಫಲಗಳಿರುವುದು ಕಂಡುಬರುತ್ತದೆ. ಈ ಯಾವುದೇ ಫಲಗಳಿಗೂ ಗಮನ ಕೊಡದೆ ಕರ್ತವ್ಯಬುದ್ಧಿಯಿಂದ ಸ್ವಧರ್ಮ ನಿಷ್ಠೆಯಿಂದ ಕರ್ಮವನ್ನು ಮಾಡುವುದು ನಿಷ್ಕಾಮ ಕರ್ಮ.

ಭಕ್ತನಾದವನು ಈಶ್ವರಾರ್ಪಣ ಭಾವದಿಂದ ಕರ್ಮವನ್ನು ಮಾಡುತ್ತ ಫಲಾಸಕ್ತಿಯಿಂದ ಮುಕ್ತನಾಗುತ್ತಾನೆ. ಶ್ರೀರಮಣ ಮಹರ್ಷಿಗಳು ಹೇಳುವಂತೆ :

> ಈಶ್ವರಾರ್ಪಿತಂ ನೇಚ್ಛಯಾ ಕೃತಂ
> ಚಿತ್ತ-ಶೋಧಕಂ ಮುಕ್ತಿಸಾಧಕಮ್ ॥

'ಭಗವದರ್ಪಣ ಬುದ್ಧಿಯಿಂದ, ಸ್ವಂತ ಇಚ್ಛೆಯನ್ನು ತೊರೆದು ಮಾಡಿದ ಕರ್ಮವು ಚಿತ್ತಶುದ್ಧಿಯನ್ನುಂಟುಮಾಡುತ್ತದೆ ಮತ್ತು ಮುಕ್ತಿಗೆ ಸಾಧನವಾಗುತ್ತದೆ.' ಶ್ರೀರಾಮಕೃಷ್ಣರು ಹೇಳುವಂತೆ ಅನಾಸಕ್ತಿಯ ತೈಲವನ್ನು ಮನಸ್ಸಿಗೆ ಹಚ್ಚಿಕೊಂಡು ಎಷ್ಟೇ ಕರ್ಮವನ್ನು ಮಾಡಿದರೂ ಅದು ಬಂಧನವಾಗುವುದಿಲ್ಲ—ಕೈಗೆ ಎಣ್ಣೆ ಸವರಿಕೊಂಡು ಹಲಸಿನ ಹಣ್ಣನ್ನು ಹೆಚ್ಚಿದರೆ ಅದರ ಅಂಟು ಕೈಗೆ ಮೆತ್ತಿಕೊಳ್ಳದಿರುವಂತೆ.

### ನಿಷ್ಕಾಮ ಕರ್ಮ ಹೇಗೆ ಸಾಧ್ಯ?

ಅನಾಸಕ್ತಿಯಿಂದ ಕರ್ಮ ಮಾಡುವುದು ಹೇಗೆ ಸಾಧ್ಯ ಎಂದು ಅನೇಕರು ಕೇಳುತ್ತಾರೆ. ಯಾವುದೇ ಕರ್ಮ ಮಾಡಬೇಕಾದರೂ ಅದರ ಹಿಂದೆ ಒಂದು ಉದ್ದೇಶವಿದ್ದೇ ಇರುತ್ತದೆ. ಆ ಉದ್ದೇಶ ಸಾಧನೆಗಾಗಿಯೇ ಕ್ರಿಯೆ ಪ್ರಾರಂಭವಾಗುತ್ತದೆ. ಫಲಾಪೇಕ್ಷೆ ಇಲ್ಲದಿದ್ದರೆ ಕರ್ಮಪ್ರವೃತ್ತಿಯೇ ಉಂಟಾಗುವುದಿಲ್ಲ. ಏನೂ ಕರ್ಮ ಮಾಡದೇ ಇರುವುದೂ ಒಂದು ಕರ್ಮವಾದರೆ ಅದರ ಹಿಂದೆಯೂ ಒಂದು ಉದ್ದೇಶವಿರುತ್ತದೆ—ಮುಷ್ಕರ ಮಾಡುವಂತೆ, ಅಥವಾ ಆಲಸ್ಯವೇ ಆ ಕರ್ಮದ ಉದ್ದೇಶವಾಗಿರಬಹುದು. ಆದ್ದರಿಂದ ನಿಷ್ಕಾಮ ಕರ್ಮ ಹೇಗೆ ಸಾಧ್ಯ?

ಆಸಕ್ತಿಯೂ ಒಂದು ಮಾನಸಿಕ ಕ್ರಿಯೆ. ಈ ಕ್ರಿಯೆ ಭೌತಿಕ ಕ್ರಿಯೆಯನ್ನು ಪ್ರಚೋದಿಸುತ್ತದೆ. ಆ ಕ್ರಿಯೆ ಪ್ರವೃತ್ತಿರೂಪದಲ್ಲಿರಬಹುದು, ಇಲ್ಲವೇ 'ನಿಷ್ಕ್ರಿಯ' ರೂಪದ ಕ್ರಿಯೆಯಾಗಿರಬಹುದು. ಅಂದರೆ ಈ ಜೀವನ ಅಥವಾ ಜಗತ್ತು ಕ್ರಿಯಾಶೀಲವಾದುದು. ಇದೊಂದು ಕ್ರಿಯೆಯ ಸರಪಣಿ. ಒಂದು ಕ್ರಿಯೆಯಿಂದ ಇನ್ನೊಂದು ಕ್ರಿಯೆ, ಅದರಿಂದ ಮತ್ತೊಂದು ಕ್ರಿಯೆ—ಹೀಗೆ ಕ್ರಿಯೆ ನಡೆಯುತ್ತಲೇ ಇರುತ್ತದೆ. ಅದು ಆಸಕ್ತಿರೂಪದ ಆಂತರಿಕ ಕ್ರಿಯೆಯಾಗಿರಲಿ, ಪ್ರವೃತ್ತಿ ರೂಪದ ಬಾಹ್ಯ ಕ್ರಿಯೆಯಾಗಿರಲಿ ಅಥವಾ 'ನಿಷ್ಕ್ರಿಯ'ರೂಪದ ಕ್ರಿಯೆಯಾಗಿರಲಿ—ಅದೆಲ್ಲವೂ ಪ್ರಕೃತಿಗೆ ಸೇರಿದುದು.

ಈ ಅರಿವಿನಿಂದ ಸಾಕ್ಷೀಭಾವದಲ್ಲಿದ್ದುಕೊಂಡು ಕರ್ಮವನ್ನು ಮಾಡಿದರೆ ಅದು ನಿಷ್ಕಾಮ ಕರ್ಮ. ಆಗ ಆಸಕ್ತಿಯೂ ಇರುತ್ತದೆ, ಕರ್ಮವೂ ಇರುತ್ತದೆ. ಆದರೆ ಬಂಧನವಿರುವುದಿಲ್ಲ. ಬಂಧನವಿದ್ದರೂ ಅದೂ ಪ್ರಕೃತಿಗೇ ಸೇರಿದುದು ತಾನೆ! ಹೀಗೆ ಪ್ರಕೃತಿಯಿಂದ ನಿರ್ಲಿಪ್ತವಾಗಿರುವುದೇ ಜೀವನ್ಮುಕ್ತಾವಸ್ಥೆ. ಈ ಸ್ಥಿತಿಯನ್ನು ಶ್ರೀಕೃಷ್ಣ ಹೀಗೆ ವರ್ಣಿಸುತ್ತಾನೆ: 'ಎಷ್ಟೇ ನದಿಗಳ ನೀರುಗಳು ಪ್ರವೇಶಿಸಿದರೂ ಸಮುದ್ರವು ಮಾತ್ರ ಪೂರ್ಣವಾಗಿಯೂ ಅಚಲವಾಗಿಯೂ ಇರುವುದೊ, ಹಾಗೆಯೇ ಸ್ಥಿತಪ್ರಜ್ಞನನ್ನು ಎಷ್ಟೇ ಆಸೆಗಳು ಪ್ರವೇಶಿಸಿದರೂ (ಅವಕ್ಕನುಗುಣವಾದ ಕ್ರಿಯೆಗಳಲ್ಲಿ ಅವನು ಎಷ್ಟೇ ತೊಡಗಿದ್ದರೂ) ಅವನು ಮಾತ್ರ ಪೂರ್ಣನೂ ಅಚಲನೂ ಆಗಿರುತ್ತಾನೆ. (ಏಕೆಂದರೆ ಅವನು ಸಾಕ್ಷೀಭಾವದಲ್ಲಿರುತ್ತಾನೆ.) (ಗೀತೆ, ೨.೭೦)